Reg. No. | | | | | | | | | | | |

# BCMKALN 102

## I Semester B.Com. Degree Examination, December 2023/January 2024
## (NEP – 2020) (2022-23 Batch Onwards)
## KANNADA
### ಕನ್ನಡ ಭಾಷಾ ಪತ್ರಿಕೆ – I

Time : 2 Hours  Max. Marks : 60

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **(3×8=24)**

1) 'ಕನ್ನಡ ತಾಯ ನೋಟ' – ಕವನದಲ್ಲಿ ಕನ್ನಡ ನಾಡು-ನುಡಿಯ ಜಾಗೃತಿ ಭಾವನೆ ಹೇಗೆ ಮೂಡಿಬಂದಿದೆ ? ವಿವರಿಸಿರಿ.

Shri Dharmasthala Manjunatheshwara College of Business Management Library MANGALORE - 575 003

**ಅಥವಾ**

'ಮುತ್ತೈದಿ ಸಾವು' ಕವನದ ಆಶಯವನ್ನು ನಿರೂಪಿಸಿರಿ.

2) 'ಬಿಳಿಗಿರಿ ರಂಗ' ಕಥೆಯಲ್ಲಿ ಸಾಕ್ಷಾತ್ ರಂಗನೇ ದರ್ಶನ ನೀಡಿದ ಪ್ರಸಂಗವನ್ನು ವಿವರಿಸಿರಿ.

**ಅಥವಾ**

ಹೊಸಗನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳು ಯಾವುವು ?

3) ಅಸ್ಸಾಂನ ಶ್ರೀಮಂತ ಸಂಸ್ಕೃತಿಯ ಬದುಕಿನ ರೀತಿಯನ್ನು ವಿವರಿಸಿರಿ.

**ಅಥವಾ**

ಕೆ. ಎಸ್. ಹೆಗ್ಡೆಯವರ ಬಾಲ್ಯ ಮತ್ತು ವಿದ್ಯಾಭ್ಯಾಸವನ್ನು ಕುರಿತು ವಿವರಿಸಿರಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(3×5=15)**

1) 'ಕವಿರಾಜ ಮಾರ್ಗ'ದಲ್ಲಿ ನಿರೂಪಿತವಾದ ಕಾವ್ಯ ಪ್ರಯೋಜನಗಳು ಯಾವುದು ? ವಿವರಿಸಿರಿ.

**ಅಥವಾ**

'ದಿಕ್ಕು' ಕವಿತೆಯ ಆಶಯವನ್ನು ನಿರೂಪಿಸಿರಿ.

2) ಕೆ. ವಿ. ಸುಬ್ಬಣ್ಣನವರ ದೃಷ್ಟಿಯಲ್ಲಿ 'ಕನ್ನಡ ಜಗತ್ತು' ಹೇಗಿದೆ ?

ಅಥವಾ

'ಹಕ್ಕಿ ಮತ್ತು ಅವಳು' – ಕಥೆಯ ಸ್ವಾರಸ್ಯವೇನು ?

3) ಚಾರ್ಲ್ಸ್ ಪೋಂಜಿ ಜನರನ್ನು ವಂಚಿಸಲು ಹೂಡಿದ ತಂತ್ರವನ್ನು ವಿವರಿಸಿರಿ.

ಅಥವಾ

'ಹಾಫ್ಲಾಂಗ್' ಎಂಬ ಹೆಸರು ಅಸ್ಸಾಂನ ಪ್ರದೇಶಕ್ಕೆ ಬರಲು ಕಾರಣವಾದ ಸಂಗತಿಯನ್ನು ವಿವರಿಸಿರಿ.

III. ಕೆಳಗಿನ **ಒಂದು** ಪದ್ಯದ ಸಂದರ್ಭ ಸೂಚಿಸಿ ಅರ್ಥ ಸ್ವಾರಸ್ಯವನ್ನು ಬರೆಯಿರಿ. **(1×5=5)**

ಕಾವೇರಿಯಿಂದಮಾ ಗೋ
ದಾವರಿವರಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಯವಿಲೀನವಿಶದ ವಿಷಯ ವಿಶೇಷಂ

ಅಥವಾ

ಕೇಳಣ್ಣ, ನಾನೊಬ್ಬ ಹಳೆಯ ಮುತ್ತೈದೆ–ಹಿರಿದಾಗಿ ಬಾಳಿದವಳೊಮ್ಮೆ ;
ಈಗ ಬಡತನ, ಬಡವೆ, ಬಡವಾದೆ; ಬಡವಾದ ಮಕ್ಕಳನು ನೋಡಿ,
ಬತ್ತಿ, ಮತ್ತಿಮ್ಮಡಿಯ ಸೊರಗಿನಲಿ ಬಡವಾದೆ–ಸಾವಿಲ್ಲ ನನಗೆ !
ಸಾವಿಲ್ಲ–ಸಾಯುತಿಹೆ; ಹೊಸ ಮಳೆಗಳಾಗಿ

IV. ಕೆಳಗಿನ **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(2×4=8)**

1) ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್
2) ತಾಯಿ ಪಾದಕೆ ನಾಕು ಊವು ಆಕಿ ಬರಬೇಕು ಬನ್ನಿರೀ ನೀವೂ
3) ಟ್ರಾಫಿಕ್ ಪೋಲಿಸನೇ ಪರವಾಗಿಲ್ಲ
4) ಸಾಯುವಾಗ ಎಂಥ ಗಟ್ಟಿ ಚಿನ್ನವಾಗಿ ಸಾಗಿದ

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. (1×8=8)

1) ಭೌಗೋಳಿಕವಾಗಿ ಕನ್ನಡ ನಾಡಿನ ವಿಸ್ತಾರದ ಕುರಿತು ತಿಳಿಸುವ ಗ್ರಂಥ ಯಾವುದು ?

2) ಬಿ. ಎಂ. ಶ್ರೀಕಂಠಯ್ಯನವರ ಕಾವ್ಯನಾಮ ಯಾವುದು ?

3) 'ನಾವು ಹುಡುಗಿಯರೇ ಹೀಗೆ' ಇದು ಯಾರ ಕವನ ಸಂಕಲನ ?

4) 'ಸಣ್ಣ ಕತೆಗಳ ಜನಕ' ಎಂದು ಖ್ಯಾತರಾದವರು ಯಾರು ?

5) ನವ್ಯ ಕಾವ್ಯದ ಪ್ರವರ್ತಕರೆಂದು ಯಾರನ್ನು ಗುರುತಿಸಲಾಗಿದೆ ?

6) 'ನನ್ನ ಕನ್ನಡ ಜಗತ್ತು' ಇದು ಯಾರು ಬರೆದ ಲೇಖನ ?

7) 'ಅಪಲೂ' ಎಂಬ ಶಬ್ದಕ್ಕೆ ಬಿಮಾಷಾ ಭಾಷೆಯಲ್ಲಿ ಯಾವ ಅರ್ಥ ಇದೆ ?

8) ನಿಟ್ಟೆ ವಿದ್ಯಾಸಂಸ್ಥೆಯ ಸ್ಥಾಪಕರು ಯಾರು ?

Shri Dharmasthala Manjunatheshwara
College of Business Management Library
MANGALORE - 575 003